# 2. "ಶೌರ್ಯ" ವಿಪತ್ತು ನಿರ್ವಹಣಾ ಕಾರ್ಯಕ್ರಮ

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರ ಕಲ್ಪನೆಯ ಅಪೂರ್ವ ಕಾರ್ಯಕ್ರಮವಾದ 'ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಕಾರ್ಯಕ್ರಮ'ವು ಕರ್ನಾಟಕ ರಾಜ್ಯದಲ್ಲಿ ಪ್ರಾಕೃತಿಕ ವಿಕೋಪಗಳ ನಿರ್ವಹಣೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಮಾತೃಶ್ರೀ ಡಾ. ಹೇಮಾವತಿ ವೀ. ಹೆಗ್ಗಡೆಯವರು ವಿಪತ್ತು ನಿರ್ವಹಣಾ ಸ್ವಯಂಸೇವಕರ ತಂಡಕ್ಕೆ "ಶೌರ್ಯ" ಎನ್ನುವ ಹೆಸರಿನಿಂದ ಗುರುತಿಸಿದ್ದು ಈ ಹೆಸರು ವ್ಯಾಪಕವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಜೂನ್ 21, 2020ರಂದು ಆರಂಭಗೊಂಡ ಈ ಕಾರ್ಯಕ್ರಮ ಇದೀಗ ಮೂರು ವರ್ಷಗಳನ್ನು ಪೂರೈಸಿದೆ. ಪ್ರಾಕೃತಿಕವಾಗಿ ಸಂಭವಿಸುವ ವಿಪತ್ತುಗಳಿರಲಿ ಅಥವಾ ಮಾನವ ನಿರ್ಮಿತ ವಿಪತ್ತುಗಳೇ ಇರಲಿ ಯಾವುದೇ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ 'ಶೌರ್ಯ' ಸಮಿತಿಯ ಸ್ವಯಂಸೇವಕರು ತುರ್ತಾಗಿ ಧಾವಿಸಿ ಅಗತ್ಯ ನೆರವು ನೀಡುತ್ತಿದ್ದಾರೆ. ಆಪತ್ತಿನ ಸಮಯದಲ್ಲಿ ನೆರವಿಗೆ ಧಾವಿಸಲು ಅಗತ್ಯವಿರುವ ನೈಪುಣ್ಯತೆಯನ್ನು ತರಬೇತಿಗಳ ಮೂಲಕ ಯುವಕ, ಯುವತಿಯರಿಗೆ ನೀಡಿದ್ದು, ಯಾವುದೇ ಸಮಯದಲ್ಲಿ ಸ್ವಯಂಸೇವಕರು ತುರ್ತು ಸ್ಪಂದನೆಗೆ ಧಾವಿಸುತ್ತಿದ್ದಾರೆ.



"ಶೌರ್ಯ" ವಿಪತ್ತು ನಿರ್ವಹಣಾ ಕಾರ್ಯಕ್ರಮದಲ್ಲಿ ತೊಡಗಿಕೊಂಡ ಸ್ವಯಂಸೇವಕರು ಪೊಲೀಸ್ ಠಾಣೆಗಳು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಆರೋಗ್ಯ ಕೇಂದ್ರಗಳು, ಜಿಲ್ಲಾಡಳಿತ, ತಾಲ್ಲೂಕು ಆಡಳಿತ, ಜನಪ್ರತಿನಿಧಿಗಳು, ಮುಖಂಡರು, ಸಂಘ ಸಂಸ್ಥೆಗಳು ಹಾಗೂ ವಿವಿಧ ಅಧಿಕಾರಿಗಳ ಪರಿಚಯ ಹೊಂದಿದ್ದು ಸಕಾಲದಲ್ಲಿ ಇಲಾಖೆಗಳ ನೆರವು ಪಡೆದು ವಿಪತ್ತಿನ ಸ್ಪಂದನೆ ನೀಡುತ್ತಿದ್ದಾರೆ. ಕೇಂದ್ರ ಸರ್ಕಾರದ ಎನ್.ಡಿ.ಆರ್.ಎಫ್ (ರಾಷ್ಟ್ರೀಯ ತುರ್ತು ಸ್ಪಂದನೆ ಪಡೆ) ರಾಜ್ಯ ಸರ್ಕಾರದ ಎಸ್.ಡಿ.ಆರ್.ಎಫ್ (ರಾಜ್ಯ ತುರ್ತು ಸ್ಪಂದನೆ ಪಡೆ) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗ್ರಹರಕ್ಷಕದಳ, ವಿವಿಧ ಸಂಘ-ಸಂಸ್ಥೆಗಳಿಂದ ವೈಜ್ಞಾನಿಕ ತರಬೇತಿಯನ್ನು ಪಡೆದಿರುವ 'ಶೌರ್ಯ' ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡ ಆಪತ್ತುಗಳ ನಿರ್ವಹಣೆಗೆ ಸರ್ಕಾರದ ವ್ಯವಸ್ಥೆಯೊಂದಿಗೆ ಯಶಸ್ವಿಯಾಗಿ ತೊಡಗಿಕೊಂಡಿದೆ.

## 2.1. ಸಮಗ್ರ ಪ್ರಗತಿಯ ಪಕ್ಷಿನೋಟ

| ಕ್ರ. ಸಂ. | ವಿಷಯ | 2019-20 | 2020-21 | 2021-22 | 2022-23 | 2023-24 | ಒಟ್ಟು |
|---|---|---|---|---|---|---|---|
| 1 | ಅನುಷ್ಠಾನಗೊಂಡ ತಾಲೂಕುಗಳು | - | 15 | 33 | 25 | 17 | 90 |
| 2 | ಸಮಾಲೋಚನೆ ಸಭೆ, ಸಂಯೋಜಕರ ತರಬೇತಿ | - | 38 | 149 | 64 | 40 | 291 |
| 3 | ಜೀವರಕ್ಷಣಾ ಪರಿಕರಗಳ ವಿತರಣೆ | - | 18 | 15 | 19 | 16 | 68 |
| 4 | ಕಾರ್ಯಕ್ರಮಕ್ಕಾಗಿ ಯೋಜನೆಯ ಅನುದಾನ | - | 28,28,505.00 | 24,29,600.00 | 33,27,818.00 | 23,70,656.00 | 1,09,56,579.00 |
| 5 | ತುರ್ತು ಕ್ಷಿಪ್ರ ತಂಡಗಳ ರಚನೆ | - | - | - | 6 | 8 | 14 |
| 6 | ವಿಪತ್ತು ಸ್ಪಂದನಾ ಚಟುವಟಿಕೆಗಳು | - | 6,997 | 43,381 | 27,750 | 32,765 | 1,10,893 |
| 7 | ಸಾಮಾಜಿಕ ಸೇವಾ ಕಾರ್ಯಗಳು | - | 12,064 | 20,358 | 19,608 | 38,973 | 91,003 |
| 8 | ಸಮವಸ್ತ್ರ (ಟೀ ಶರ್ಟ್) ವಿತರಣೆ | - | 1,756 | 2,599 | 3,973 | 3,232 | 11,560 |
| 9 | ಸಮವಸ್ತ್ರ (ಪ್ಯಾಂಟ್) ವಿತರಣೆ | - | - | 142 | 1,473 | 726 | 2,341 |
| 10 | ಪ್ರಮಾಣ ಪತ್ರ ವಿತರಣೆ | - | 496 | 2,599 | 3,973 | 3,232 | 10,300 |

| | | | | | | | |
|---|---|---|---|---|---|---|---|
| 11 | ಕ್ಯಾಪ್ ವಿತರಣೆ | – | – | 49 | 241 | 1,063 | 1,353 |
| 12 | ವಲಯವಾರು ಘಟಕಗಳ ರಚನೆ | – | – | 302 | 52 | 58 | 412 |
| 13 | ವಲಯವಾರು ಘಟಕದ ಮಾಸಿಕ ಸಭೆಗಳು | – | – | 2,190 | 1,165 | 1,019 | 4,374 |
| 14 | ತಾಲೂಕು ಸಮಿತಿ ಸಭೆಗಳು | – | 4 | 35 | 75 | 90 | 204 |
| 15 | ಜೀವ ರಕ್ಷಣಾ/ಕೌಶಲ್ಯ ತರಬೇತಿ | – | – | – | 1,082 | 173 | 1,255 |
| 16 | ವಾತ್ಸಲ್ಯ ಮನೆ ನಿರ್ಮಾಣಕ್ಕೆ ಸಹಕಾರ | – | | 5 | 14 | 26 | 45 |
| 17 | ಸ್ವಚ್ಛತಾ ಕಾರ್ಯಕ್ರಮಗಳು | – | 5,142 | 7,941 | 9,941 | 13,008 | 36,032 |
| 18 | ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಕರ ಸಹಕಾರ | – | 1,863 | 2,146 | 1,871 | 3,465 | 9,345 |
| 19 | ಶಿವರಾತ್ರಿ ಸಂದರ್ಭದಲ್ಲಿ ಪಾದಯಾತ್ರಿಗಳಿಗೆ ನೆರವು | – | 13 | 17 | 19 | 24 | 73 |
| 20 | ಸ್ವಯಂಸೇವಕರ ಡೈರೆಕ್ಟರಿ | – | – | – | 1 | 2 | 3 |
| 21 | ಸ್ವಯಂಸೇವಕರಿಗೆ ವಿಮಾ ಸೌಲಭ್ಯ | – | – | 2,284 | 3,338 | 6969 | 12,591 |
| 22 | ಸ್ವಯಂಸೇವಕರಿಗೆ ಯೋಜನೆಯಿಂದ ಆರ್ಥಿಕ ಸಹಕಾರ | – | – | 1,15,000.00 | 9,065.00 | 23,500.00 | 1,47,565.00 |
| 23 | ಆಪದ್‌ಮಿತ್ರ ತರಬೇತಿ ಪಡೆದವರು | – | – | – | 48 | – | 48 |
| 24 | ಗುರುತಿಸಲ್ಪಟ್ಟ ಶೌರ್ಯ ಸಾಧಕರು | – | | 25 | 25 | 25 | 75 |
| 25 | ವಿಪತ್ತು ನಿರ್ವಹಣಾ ಪ್ರಾಧಿಕಾರದ ಭೇಟಿ | 5 | 17 | 21 | 13 | 8 | 64 |
| 26 | ಮುಖ್ಯಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಅಗ್ನಿಶಾಮಕ ಮುಖ್ಯಸ್ಥರ ಕ್ಷೇತ್ರ ಭೇಟಿ | – | – | – | 2 | 2 | 4 |
| 27 | ಪುಸ್ತಕ, ಮಾಹಿತಿ ಪತ್ರ ಮತ್ತು ತರಬೇತಿ ಕೈಪಿಡಿ | – | – | 6,400 | 5,110 | 3,600 | 15,110 |

## 2.2 ಕಾರ್ಯಕ್ರಮ ಅನುಷ್ಠಾನಕ್ಕಾಗಿ ನೀಡಿದ ಸುತ್ತೋಲೆಗಳು

| ಕ್ರ. ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | 07/EDOO/2023-24, 13.04.2023 | ಶೌರ್ಯ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಕುರಿತು |
| 2 | 20/EDOO/2023-24, 06.05.2023 | 2023-24ನೇ ಸಾಲಿನ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದಡಿ ಗಿಡನಾಟಿ ಕಾರ್ಯಕ್ರಮ ಮಾಡುವ ಬಗ್ಗೆ. |
| 3 | 23.05.2023/55RO/DM | ಕ್ರಿಯಾಯೋಜನೆ 2023-24ರ ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮ, ಅರಣ್ಯ ಇಲಾಖೆಯಿಂದ ಸಸಿಗಳನ್ನು ಪಡೆಯುವ ಕುರಿತು. |
| 4 | 106/EDOO/2023-24, 21.11.2023 | 'ಶೌರ್ಯ' ವಿಪತ್ತು ನಿರ್ವಹಣೆ ಕಾರ್ಯಕ್ರಮದ ಕುರಿತಂತೆ ಗಮನಹರಿಸುವ ಕುರಿತು. |
| 5 | 147/EDOO/2023-24, 24.02.2024 | 'ಶೌರ್ಯ' ಕಾರ್ಯಕ್ರಮದ ಬಲವರ್ಧನೆಯಲ್ಲಿ ಮಾಡಬೇಕಾದ ಸುಧಾರಣೆಗಳ ಕುರಿತು |

## 2.3 ಮುಖ್ಯಾಂಶಗಳು

- ಸರಕಾರವು ರಾಜ್ಯದ 31 ಜಿಲ್ಲೆಗಳ 236 ತಾಲೂಕುಗಳ ಪೈಕಿ 195 ತಾಲೂಕುಗಳನ್ನು ಬರಪೀಡಿತ, 16 ಜಿಲ್ಲೆಗಳ 43 ತಾಲೂಕುಗಳನ್ನು ಪ್ರವಾಹಪೀಡಿತ ತಾಲೂಕುಗಳೆಂದು ಘೋಷಿಸಿದೆ. ಈ ಪಟ್ಟಿಯ ಪ್ರಕಾರ ಪ್ರವಾಹಪೀಡಿತ, ಮಲೆನಾಡು, ಕರಾವಳಿ ಹಾಗೂ ಬರಪೀಡಿತ ಪ್ರದೇಶದ 90 ತಾಲೂಕುಗಳಲ್ಲಿ 'ಶೌರ್ಯ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.
- ಪ್ರತೀ ತಾಲೂಕು ಸಮಿತಿಯಲ್ಲಿ ಕನಿಷ್ಠ 100ರಿಂದ 200 ರವರೆಗೆ ಸ್ವಯಂಸೇವಕರಿದ್ದಾರೆ.




- 21ರಿಂದ 50 ವರ್ಷದೊಳಗಿನ ಆಸಕ್ತಿ ಹೊಂದಿರುವ ಮತ್ತು ಈಗಾಗಲೇ ಇಂತಹ ತುರ್ತು ಸೇವೆಗಳನ್ನು ಮಾಡುತ್ತಿರುವ ಸ್ವಯಂಸೇವಕರನ್ನು ಗುರುತಿಸಿ ಅವರಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸು ಇಲಾಖೆ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ, ವಿಪತ್ತು ನಿರ್ವಹಣಾ ಕೋಶ ಮತ್ತು ವಿಪತ್ತು ನಿರ್ವಹಣೆಯಲ್ಲಿ ತೊಡಗಿಸಿಕೊಂಡ ಸಾಧಕರಿಂದ ತರಬೇತಿ ನೀಡಲಾಗಿದೆ.
- ಸ್ವಯಂಸೇವಕರ ಕೆವೈಸಿ ಸಂಗ್ರಹಿಸಿ ಸ್ವಯಂಘೋಷಣಾ ಪತ್ರವನ್ನು ಪಡೆದು ಸೇರಿಸಲಾಗುತ್ತಿದೆ. ಸ್ವಯಂಸೇವಕರಿಗೆ ಇದುವರೆಗೆ ರೂ. 32.70 ಲಕ್ಷ ವೆಚ್ಚದಲ್ಲಿ ಆರೋಗ್ಯರಕ್ಷಾ ವಿಮೆಯನ್ನು ಮಾಡಲಾಗಿದೆ. ವರದಿ ವರ್ಷದಲ್ಲಿ ರೂ. 24.38 ಲಕ್ಷ ವಿಮೆಗಾಗಿ ಮೊತ್ತವನ್ನು ಭರಿಸಲಾಗಿದೆ.
- ತಿಂಗಳಿಗೊಂದು ಸಾಮಾಜಿಕ ಸೇವೆ, ತಿಂಗಳಿಗೊಂದು ಸಭೆ, ತುರ್ತು ಸಂದರ್ಭದ ಎಲ್ಲಾ ವಿಪತ್ತು ಸೇವೆಗಳನ್ನು ನಿರ್ವಹಿಸಲು ಮಾರ್ಗದರ್ಶನ ನೀಡಲಾಗಿದೆ. ಈ ಬಾಬ್ತು ವರದಿ ವರ್ಷದಲ್ಲಿ ರೂ. 31.44 ಲಕ್ಷ ಮೊತ್ತದ ಗೌರವ ಭತ್ತೆಯನ್ನು ಸ್ವಯಂಸೇವಕರಿಗೆ ಪಾವತಿಸಲಾಗಿದೆ.



- ಪ್ರತೀ 100 ಜನರ ತಂಡದಲ್ಲಿ ಗರಿಷ್ಠ 30 ಮಹಿಳೆಯರನ್ನು ಆಯ್ಕೆ ಮಾಡಲಾಗುತ್ತಿದೆ.
- ಕಾರ್ಯಕ್ರಮದ ಅನುಪಾಲನೆಗೆ ವಲಯವಾರು 1 ಅಥವಾ 2 ಘಟಕಗಳನ್ನು ರಚಿಸಿದ್ದು, ತಿಂಗಳಿಗೊಮ್ಮೆ ಸಭೆಯನ್ನು ನಡೆಸಲಾಗುತ್ತಿದೆ. ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಮತ್ತು ಕೈಗೊಳ್ಳುವ ನಿರ್ಣಯಗಳ ದಾಖಲೀಕರಣಕ್ಕೆ ನಿರ್ಣಯ ಪುಸ್ತಕಗಳನ್ನು ನೀಡಲಾಗಿದೆ. ಒಟ್ಟು 1000 ಪುಸ್ತಕಗಳನ್ನು ಮುದ್ರಿಸಿದ್ದು, ಇದರ ವೆಚ್ಚ ರೂ.2.25 ಲಕ್ಷ ಆಗಿರುತ್ತದೆ.
- ರಾಜ್ಯಾದ್ಯಂತ 412 ಘಟಕಗಳ ಮೂಲಕ ಯಾವುದೇ ಪ್ರಕಾರದ ವಿಪತ್ತು ಸೇವೆ ಮತ್ತು ಸಾಮಾಜಿಕ ಸೇವೆ ಮಾಡುತ್ತಿದ್ದು, ಇದುವರೆಗೆ ಒಟ್ಟು 2,01,896 ಚಟುವಟಿಕೆಗಳನ್ನು ನಿರ್ವಹಿಸಿದ್ದು, ಈ ಉದ್ದೇಶಕ್ಕಾಗಿ 10,02,700 ಮಾನವ ದಿನಗಳನ್ನು ಸಮಾಜಕ್ಕೆ ಸಮರ್ಪಿಸಿರುತ್ತಾರೆ.

- ಸ್ವಯಂಸೇವಕರ ಕೆಲಸ ಕಾರ್ಯಗಳ ಮತ್ತು ವಿಪತ್ತು ನಿರ್ವಹಣೆಗೆ ಸಹಕಾರಿಯಾಗಲು ರಕ್ಷಣಾ ಮತ್ತು ಶ್ರಮದಾನದ ಪರಿಕರಗಳನ್ನು 68 ಯೋಜನಾ ಕಚೇರಿಗಳ ನಿರ್ದಿಷ್ಟ ಸ್ಥಳಗಳಲ್ಲಿ ಇರಿಸಲಾಗಿದೆ.
- ರಾಜ್ಯದಲ್ಲಿ ಈಗಾಗಲೇ 8 ಕ್ಷಿಪ್ರ ತಂಡಗಳಿದ್ದು, ತುರ್ತು ಸಂದರ್ಭದಲ್ಲಿ ಈ ತಂಡಗಳು ಜಿಲ್ಲೆಯ ಹೊರತಾಗಿಯೂ ಸಂಚರಿಸಿ ಸೇವೆ ನೀಡುತ್ತಿದ್ದಾರೆ.
- ಪ್ರತೀ ಶೌರ್ಯ ತಾಲೂಕು ಸಮಿತಿಯಲ್ಲಿ ಓರ್ವ ಮಾಸ್ಟರ್ ಮತ್ತು ಕ್ಯಾಪ್ಟನ್, ಘಟಕದಲ್ಲಿ ಘಟಕ ಪ್ರತಿನಿಧಿ ಸಂಯೋಜಕರಿರುತ್ತಾರೆ. ಇವರನ್ನು ಸೇರಿಸಿ ಕೋರ್‌ಕಮಿಟಿ ಸಭೆ ವರ್ಷದಲ್ಲಿ 3 ಬಾರಿ ನಡೆಸಲಾಗುತ್ತದೆ.



- ತಾಲೂಕು ಸಮಿತಿ ಸಭೆಗಳನ್ನು ವರ್ಷದಲ್ಲಿ 2 ಬಾರಿ ನಡೆಸಿ ಕಾರ್ಯಕರ್ತರ ಮತ್ತು ಘಟಕಗಳ ಮೌಲ್ಯಮಾಪನ ಮಾಡಲಾಗುತ್ತದೆ.



- ಎಲ್ಲಾ ಸ್ವಯಂಸೇವಕರಿಗೆ ತಮ್ಮ ವ್ಯಾಪ್ತಿಯ ಯೋಜನಾಧಿಕಾರಿಗಳ ಬೇಡಿಕೆಗನುಸಾರವಾಗಿ ಸಮವಸ್ತ್ರ, ಕ್ಯಾಪ್, ಪ್ಯಾಂಟ್ ನೀಡಲಾಗುತ್ತಿದೆ.
- ಶೌರ್ಯ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 90 ವಾಟ್ಸಾಪ್ ಗುಂಪುಗಳ ನಿರ್ವಹಣೆ, ವರದಿಗಳ ಸಂಗ್ರಹಣೆಗಾಗಿ 20 ವಿವಿಧ ನಮೂನೆಗಳನ್ನು ಮಾಡಲಾಗಿದೆ.
- ಅನಾರೋಗ್ಯ, ತುರ್ತು ಸಂದರ್ಭದ ಸ್ವಯಂಸೇವಕರ ನೆರವಿಗಾಗಿ ಯೋಜನೆಯಿಂದ ಆರ್ಥಿಕ ಸಹಕಾರವನ್ನು ನೀಡಲಾಗಿದೆ. ಸಂಘದಲ್ಲಿರುವ ಸದಸ್ಯರಿಗೆ ಕ್ರಿಟಿಕಲ್ ಇಲ್‌ನೆಸ್ ಫಂಡ್ ಮೂಲಕ ನೆರವು ಒದಗಿಸಲಾಗಿದೆ. ಇದುವರೆಗೆ ನೀಡಲಾದ ಮೊತ್ತ ರೂ.14.60 ಲಕ್ಷ ಆಗಿರುತ್ತದೆ.
- ತಾಲೂಕುವಾರು ಸ್ವಯಂಸೇವಕರ ಕೈಪಿಡಿಯನ್ನು ಮಾಡುವ ನಿಟ್ಟಿನಲ್ಲಿ 3 ತಾಲೂಕುಗಳಲ್ಲಿ ಮಾತ್ರ ಈ ಕಾರ್ಯ ಪೂರೈಸಲಾಗಿದೆ. ಕಾರ್ಯಕರ್ತರು ರಾಜೀನಾಮೆ ನೀಡಿದ ಸಂದರ್ಭ ಕೈಪಿಡಿ ಮಾಡಿದಾಗ ಆಗುವ ಸಮಸ್ಯೆಯನ್ನು ಮನಗಂಡು ಶೌರ್ಯ ವೆಬ್‌ಸೈಟ್‌ನ್ನು www. skdrdpdisaster management.org ಮಾಡಲಾಗಿದ್ದು, ಸ್ವಯಂಸೇವಕರ ಕಾರ್ಯಕ್ರಮದ ಸಂಪೂರ್ಣ ವರದಿಯನ್ನು ಅಪ್‌ಲೋಡ್ ಮಾಡುವ ಕೆಲಸ ನಡೆಯುತ್ತಿದೆ. ಈ ವೆಬ್‌ಸೈಟ್‌ನಲ್ಲಿ ತಾಲೂಕುವಾರು ಕಾರ್ಯಕರ್ತರ ವಿವರವುಳ್ಳ ವೈಯಕ್ತಿಕ ಮಾಹಿತಿಯನ್ನು ದಾಖಲಿಸಲಾಗಿದೆ.
- ಕಾರ್ಯಕ್ರಮದ ನಿರಂತರತೆಗಾಗಿ ತರಬೇತಿ, ವ್ಯಕ್ತಿತ್ವ ವಿಕಸನ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ. ವಿಪತ್ತು ನಿರ್ವಹಣೆಯಲ್ಲಿ ಪ್ರಮುಖವಾಗಿ ಪ್ರವಾಹ ಕಾರ್ಯಾಚರಣೆ, ಅಗ್ನಿ ದುರಂತ, ಗುಡ್ಡ ಕುಸಿತ, ಅಪಘಾತ, ಆತ್ಮಹತ್ಯೆ, ಸಿಲಿಂಡರ್ ಸ್ಫೋಟ, ತುರ್ತು ರಕ್ತದಾನ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಪೊಲೀಸು, ಅರಣ್ಯ, ಅಗ್ನಿಶಾಮಕದಳ, ಆರೋಗ್ಯ ಇಲಾಖೆ, ವಿದ್ಯುತ್ ನಿಗಮದ ಜೊತೆಗೂಡಿ ಕಾರ್ಯಾಚರಣೆ, ಕಾಡುಪ್ರಾಣಿಗಳ ಹಾವಳಿ, ಪ್ರಥಮ ಚಿಕಿತ್ಸೆ, ಮನೆಗಳ ದುರಸ್ಥಿ, ಮನೆಗಳ ಸ್ವಚ್ಛತೆ, ಕಾಲುಸಂಕಗಳು, ರಸ್ತೆ ರಿಪೇರಿ, ಕುಡಿಯುವ ನೀರು ಮತ್ತು ಆಹಾರ ಸಾಮಗ್ರಿಗಳ ಪೂರೈಕೆ, ಹಾವು ಕಡಿತ, ಶೌಚಾಲಯ ನಿರ್ಮಾಣ, ಗಂಜಿಕೇಂದ್ರ ಕಾರ್ಯಾಚರಣೆ, ತಾತ್ಕಾಲಿಕ ಮನೆ ನಿರ್ಮಾಣ, ಶವ ಸಂಸ್ಕಾರ, ಅಂಬುಲೆನ್ಸ್ ಮತ್ತು ಆರೋಗ್ಯ ಸೇವೆ, ಅಣೆಕಟ್ಟು ಸ್ವಚ್ಛತೆ., ಹೀಗೆ ವಿವಿಧ ರೀತಿಯ ವಿಪತ್ತು ಸೇವೆಗಳನ್ನು ನಿರ್ವಹಿಸುತ್ತಿದ್ದಾರೆ.





- ಸ್ವಯಂಸೇವಕರು ಸಾಮಾಜಿಕ ಸೇವೆಯಲ್ಲಿ ಪ್ರಮುಖವಾಗಿ ಗಿಡಗಳನ್ನು ನೆಡುವುದು, ಮರಗಳನ್ನು ಪೋಷಿಸುವುದು, ಸಾರ್ವಜನಿಕ ಸ್ವಚ್ಛತೆ, ಪ್ರಾಣಿ-ಪಕ್ಷಿಗಳಿಗೆ ಪ್ರಥಮ ಚಿಕಿತ್ಸೆ ಮತ್ತು ಆಹಾರ, ನೀರು ಪೂರೈಕೆ, ರಸ್ತೆ ಸ್ವಚ್ಛತೆ, ನೀರಿನ ಟ್ಯಾಂಕ್ ಸ್ವಚ್ಛತೆ, ರಕ್ತದಾನ ಶಿಬಿರ, ಸೌಹಾರ್ದ ಸಭೆ, ಮಾಹಿತಿ ಸಭೆ, ಗ್ರಾಮ ಸಭೆ, ಸರಕಾರಿ ಸೌಲಭ್ಯಗಳ ಮಾಹಿತಿ, ಜಲಾನಯನ, ಮದ್ಯವರ್ಜನ ಶಿಬಿರ, ಶಾಲೆಗಳಿಗೆ ತರಬೇತಿ, ಶಾಲೆಗಳ ಮೂಲಭೂತ ಸೌಕರ್ಯಕ್ಕೆ ಸಹಕಾರ, ಬಸ್‌ಸ್ಟ್ಯಾಂಡ್ ರಿಪೇರಿ, ರಾಷ್ಟ್ರೀಯ ಹಬ್ಬಗಳ ಆಚರಣೆ, ರೈತರಿಗೆ ಸಹಕಾರ, ಅನಾರೋಗ್ಯ ಪೀಡಿತರಿಗೆ ಸಹಕಾರ, ಅಸ್ವಸ್ಥ ಮನೋರೋಗಿಗಳಿಗೆ ಸಹಕಾರ, ಆಹಾರ, ಔಷಧಿ ಪೂರೈಕೆ, ಮರಣ ಸಾಂತ್ವಾನ, ಪಾದಯಾತ್ರೆ, ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಶ್ರಮದಾನ, ಸಾಮೂಹಿಕ ಅನ್ನಸಂತರ್ಪಣೆಗೆ ಸಹಕಾರ, ಜಾಗೃತಿ ಕಾರ್ಯಕ್ರಮಗಳು, ಬೀಚ್, ನದಿ ದಡ, ಐತಿಹಾಸಿಕ ಸ್ಥಳ, ಧಾರ್ಮಿಕ ಸ್ಥಳಗಳ ಸ್ವಚ್ಛತೆ, ಕಾಲುವೆ ದುರಸ್ಥಿ, ಕುಡಿಯುವ ನೀರಿನ ಬಾವಿ ಸ್ವಚ್ಛತೆ ಮುಂತಾದ ಸಾಮಾಜಿಕ ಸೇವೆಗಳನ್ನು ನಿರ್ವಹಿಸುತ್ತಿದ್ದಾರೆ.



- ರಾಜ್ಯದಲ್ಲಿ 80ಕ್ಕೂ ಮಿಕ್ಕಿದ ಸ್ವಯಂಸೇವಕರು ವಿಶೇಷ ಕೌಶಲ ಹೊಂದಿರುವ ಪ್ರತಿಭಾನ್ವಿತ ಸ್ವಯಂಸೇವಕರಾಗಿರುತ್ತಾರೆ. ಮುಖ್ಯವಾಗಿ ಮುಳುಗುತಜ್ಞರು, ಅಂಬುಲೆನ್ಸ್ ಚಾಲಕರು, ಪ್ರಥಮ ಚಿಕಿತ್ಸೆ ನೀಡುವವರು, ಉರಗ ರಕ್ಷಕರು, ನಾಟಿ ವೈದ್ಯರು, ನಿವೃತ್ತ ಯೋಧರು, ತರಬೇತುದಾರರು ಹೀಗೆ ತುರ್ತು ಸಂದರ್ಭ ಬಂದಾಗ ಶೀಘ್ರವೇ ಸ್ಪಂದಿಸಿ ವೈಯಕ್ತಿಕ ಸೇವೆಯನ್ನು ನೀಡುತ್ತಿದ್ದಾರೆ.
- ಶೌರ್ಯ ತಂಡದ ಪ್ರೇರಣೆಯಿಂದ ಬಹಳಷ್ಟು ಮಂದಿ ನಾಯಕತ್ವ ಕೌಶಲವನ್ನು ಪಡೆದು ಜನಪ್ರತಿನಿಧಿಗಳಾಗಿರುತ್ತಾರೆ. ರಾಜಕೀಯ, ಸಂಘ ಸಂಸ್ಥೆ, ಒಕ್ಕೂಟ, ಶಾಲೆಗಳಲ್ಲಿ ನಾಯಕತ್ವ ನೀಡುತ್ತಿದ್ದಾರೆ. ಆಪದ್‌ಮಿತ್ರ ತರಬೇತಿಯಲ್ಲಿಯೂ ಭಾಗವಹಿಸಿರುತ್ತಾರೆ. ಸ್ಥಳೀಯವಾಗಿ ಜನರು ನೇರ ಸ್ವಯಂಸೇವಕರನ್ನೇ ಕರೆದು ಸಹಕಾರಕ್ಕಾಗಿ ವಿನಂತಿಸುತ್ತಿದ್ದಾರೆ. ಹೀಗೆ ಸಮಾಜದಲ್ಲಿ ಗುರುತಿಸುವ ವ್ಯಕ್ತಿಗಳಾಗಿ ಕೆಲಸ ಮಾಡುತ್ತಿರುವುದು ಸಂತೋಷದಾಯಕವಾಗಿದೆ.
- ಶೌರ್ಯ ತಂಡದ ಸ್ವಯಂಸೇವಕರಿಗೆ ಪಥ ಸಂಚಲನ, ಶಿಸ್ತಿನ ಪಾಠವನ್ನು ಹೇಳಿಕೊಡಲಾಗುತ್ತಿದೆ. ಇದರ ಪರಿಣಾಮವಾಗಿ 15ಕ್ಕೂ ಹೆಚ್ಚಿನ ಸ್ವಯಂಸೇವಕರು ದೇಶ ಸೇವೆಗೆ ಸೈನಿಕರಾಗಿ, 3ಕ್ಕೂ ಹೆಚ್ಚಿನ ಸ್ವಯಂಸೇವಕರು ಪೊಲೀಸು ಇಲಾಖೆಗೆ ಸೇರಿರುವ ವರದಿ ಬಂದಿರುತ್ತದೆ.
- ಈ ಬಾರಿ ವಿಶೇಷವಾಗಿ ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರ ಪ್ರೇರಣೆ ಮತ್ತು ಮಾರ್ಗದರ್ಶನದಲ್ಲಿ ಶೌರ್ಯ ಸ್ವಯಂಸೇವಕರು ಬಡ ಕುಟುಂಬದ ಮನೆ ರಿಪೇರಿ, ಮನೆ ಕಟ್ಟಲು ಶ್ರಮದಾನ ಹಾಗೂ ಯೋಜನೆಯ ವಾತ್ಸಲ್ಯ ಮನೆ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಒಟ್ಟು 867 ಮನೆ ರಿಪೇರಿ ಮತ್ತು ಶ್ರಮದಾನ, 90 ವಾತ್ಸಲ್ಯ ಮನೆಗಳಿಗೆ ಸಹಕಾರ ನೀಡಿರುತ್ತಾರೆ.





- ಪೂಜ್ಯರು ವಿಶೇಷವಾಗಿ 'ಶೌರ್ಯ ಲೋಗೊ'ವನ್ನು ಬಿಡುಗಡೆಗೊಳಿಸಿದ್ದು, ಈ ಲೋಗೊವನ್ನು ಸಮವಸ್ತ್ರ, ಕ್ಯಾಪ್ ಮತ್ತು ಕಾರ್ಯಕ್ರಮಗಳಲ್ಲಿ ಬಳಸಲಾಗುತ್ತಿದೆ.
- ಪ್ರತಿಯೊಂದು ಘಟಕಗಳ ವರದಿಯನ್ನು ಕ್ರೋಢೀಕರಿಸಿ ಘಟಕಗಳಿಗೆ ಶ್ರೇಣಿಯನ್ನು ನೀಡಿ ಸಮಾಜ ಸೇವೆಯಲ್ಲಿ ಪೈಪೋಟಿ ಬರುವಂತೆ ಪ್ರೋತ್ಸಾಹಿಸಲಾಗುತ್ತಿದೆ.

- ಶೌರ್ಯ ಕಾರ್ಯಕ್ರಮವನ್ನು ಸರಕಾರದ ಸಹಭಾಗಿತ್ವದಲ್ಲಿ ಅನುಷ್ಠಾನ ಮಾಡಲು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (SDMA), 'ವರುಣ ಮಿತ್ರ' ವೆದರ್ ಸ್ಟೇಷನ್ (ಕರ್ನಾಟಕ ರಾಜ್ಯ ಹವಾಮಾನ ಪರಿಸ್ಥಿತಿಗಳ ಬಗ್ಗೆ ಮಾಹಿತಿ ನೀಡುವ ಸಂಸ್ಥೆ), ಕೆ.ಎಸ್.ಎನ್.ಡಿ.ಎನ್.ಸಿ (ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ), ಯುನಿಸೆಫ್ ಸಂಸ್ಥೆಯ ಸಹಕಾರವನ್ನು ಕೋರಲಾಗಿದೆ.



- ಸ್ವಯಂಸೇವಕರ ಮಾಹಿತಿಗಾಗಿ ಪುಸ್ತಕ, ಕೈಪಿಡಿ, ಮಾಹಿತಿ ಪತ್ರ, ಪೋಸ್ಟರ್, ಬ್ಲಾಗ್, ಸಮೂಹ ಮಾಧ್ಯಮಗಳಲ್ಲಿ ಮಾಹಿತಿಯನ್ನು ನೀಡಿ ಸ್ವಯಂಸೇವಕರಿಗೆ ಮತ್ತು ಸಮಾಜಕ್ಕೆ ಶೌರ್ಯ ಕಾರ್ಯಕ್ರಮದಿಂದಾದ ಸಾಧನೆಯ ಪರಿಚಯ ಮಾಡಲಾಗುತ್ತಿದೆ.

ಶೌರ್ಯ ಕಾರ್ಯಕ್ರಮವನ್ನು ಜನಜಾಗೃತಿ ಪ್ರಾದೇಶಿಕ ವಿಭಾಗದ ಮೂಲಕ ನಿರ್ವಹಿಸುತ್ತಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ.) ಇದರ ಅನುದಾನದಲ್ಲಿ ನಡೆಸಲಾಗುತ್ತಿದೆ. ಶ್ರೀ ಜೈವಂತ್ ಪಟಗಾರ್‌ರವರು ಪ್ರಾದೇಶಿಕ ವಿಭಾಗದ ಶೌರ್ಯ ಕಾರ್ಯಕ್ರಮಗಳ ಯೋಜನಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಕನಿಷ್ಠ ಅವಧಿಯಲ್ಲಿ ಶೌರ್ಯ ಕಾರ್ಯಕ್ರಮ ಸಮಾಜದ ಅಗತ್ಯದ ಕಾರ್ಯಕ್ರಮವಾಗಿ ಗುರುತಿಸಲ್ಪಟ್ಟಿದೆ. ಈ ಕಾರ್ಯಕ್ರಮಕ್ಕೆ ಯೋಜನೆಯ ಎಲ್ಲಾ ಬಳಗದವರು ಆಸಕ್ತಿಯಿಂದ ಕೈಜೋಡಿಸುತ್ತಿದ್ದಾರೆ.

## 2.4 ವಿಶೇಷ ಕಾರ್ಯಾಚರಣೆಗಳು

1. 2019ರಿಂದ 2021ರವರೆಗಿನ ಕೋವಿಡ್ ಸಂದರ್ಭದಲ್ಲಿ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸುವುದರಿಂದ ಹಿಡಿದು ಹೆಣವನ್ನು ಸುಡುವ ಕೆಲಸದವರೆಗೆ ಸ್ವಯಂಸೇವಕರು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಯೋಜನೆಯ 3 ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಸ್ವಯಂಸೇವಕರಾಗಿ ಸಹಕರಿಸಿರುತ್ತಾರೆ. ಆರೋಗ್ಯ, ಆಹಾರ ಕಿಟ್ ವಿತರಣೆ, ಆಹಾರ ಸಾಮಗ್ರಿ ಒದಗಣೆ, ಆರೋಗ್ಯ ಇಲಾಖೆಯೊಂದಿಗೆ ಸೇವೆ, ಲಾಕ್‌ಡೌನ್ ಸಂದರ್ಭ ಪೋಲೀಸು ಇಲಾಖೆಯೊಂದಿಗೆ ಶೌರ್ಯ ಸೇನಾನಿಗಳಂತೆ ಕೆಲಸ ನಿರ್ವಹಿಸಿರುತ್ತಾರೆ.
2. 2022ರ ಜೂನ್ ತಿಂಗಳಿನಲ್ಲಿ ಸುಳ್ಯ ತಾಲೂಕಿನ, ಹರಿಹರ, ಪಲ್ಲತಡ್ಕ, ಕೊಲ್ಲಮೊಗ್ರು, ಕೊಡಗು, ಸಂಪಾಜೆ ಪರಿಸರದಲ್ಲಿ ಅತಿಯಾದ ಮಳೆ ಮತ್ತು ಗುಡ್ಡ ಕುಸಿತದಿಂದ ನದಿ ತೀರದ ಮತ್ತು ಗುಡ್ಡಗಾಡಿನ ಸಾವಿರಾರು ಮನೆಗಳಿಗೆ ತೊಡಕಾದಾಗ, ರಸ್ತೆ ಸಂಚಾರಕ್ಕೆ ಅಡ್ಡಿಯಾದಾಗ, 300ಕ್ಕೂ ಹೆಚ್ಚಿನ ಶೌರ್ಯ ಸ್ವಯಂಸೇವಕರು ಹಗಲಿರುಳು ಶ್ರಮಿಸಿ ವಿಪತ್ತು ಕಾರ್ಯಾಚರಣೆ ನಡೆಸಿರುತ್ತಾರೆ.
3. ಅಥಣಿ, ಚಿಕ್ಕೋಡಿ, ನಿಪ್ಪಾಣಿ, ಹಾರೋಗೇರಿ, ನವಲಗುಂದ, ಕುಂದಗೋಳ, ಬಾಗಲಕೋಟೆ ಪರಿಸರದಲ್ಲಿ ಮಳೆಯಿಂದ ಅಣೆಕಟ್ಟು ನೀರು ಬಿಡುವ ಸಂದರ್ಭದ ದುರಂತಗಳನ್ನು ಎದುರಿಸುವಲ್ಲಿ ಸಂತ್ರಸ್ತರಿಗೆ ಸಹಕರಿಸಿರುತ್ತಾರೆ.
4. ಮಲೆನಾಡು ಪ್ರದೇಶವಾದ ಚಿಕ್ಕಮಗಳೂರು, ಕೊಪ್ಪ, ತೀರ್ಥಹಳ್ಳಿ, ಶೃಂಗೇರಿ, ಮೂಡಿಗೆರೆ, ಸಕಲೇಶಪುರ, ಕಾರ್ಕಳ, ಶಿರಸಿ, ಸಿದ್ಧಾಪುರ, ಕಳಸಗಳಲ್ಲಿ ಮಳೆ, ಗಾಳಿಯಿಂದ ಮರ ಮತ್ತು ರಸ್ತೆ ತಡೆ ಉಂಟಾದಾಗ ತುರ್ತು ಧಾವಿಸಿ ತೆರವು ಕಾರ್ಯ ನಡೆಸಿ ಜಿಲ್ಲಾಡಳಿತದ ಪ್ರಶಂಸೆಗೆ ಪಾತ್ರರಾಗಿರುತ್ತಾರೆ.

## 2.5 ಶೌರ್ಯ ಕಾರ್ಯಕ್ರಮಕ್ಕೆ ತಗಲಿದ ಖರ್ಚು-ವೆಚ್ಚಗಳು

| ಕ್ರ. ಸಂ. | ವಿಷಯ | 2023-24 | 2022-23 | 2020-2022 | ಇದುವರೆಗೆ ಒಟ್ಟು |
|---|---|---|---|---|---|
| 1 | ಸಂಯೋಜಕರ ತರಬೇತಿ | 1,50,426 | 2,35,048 | 2,34,312 | 6,19,786 |
| 2 | ಸ್ವಯಂಸೇವಕರ ತರಬೇತಿ | 14,13,869 | 2493696 | 12,72,487 | 51,80,052 |
| 3 | ಸಂಯೋಜಕರ ಸಭೆಗಳು | 96,451 | 24,060 | 1,63,375 | 2,83,886 |
| 4 | ಸಮಿತಿಯ ವಿಶೇಷ ಸಭೆಗಳು | - | 1,10,689 | - | 1,10,689 |
| 5 | ವಿಪತ್ತು ಮತ್ತು ಸಾಮಾಜಿಕ ಸೇವಾ ಕಾರ್ಯಗಳಿಗೆ ಮಂಜೂರಾತಿ | 21,73,245.00 | 9,08,226.00 | 4,06,612.00 | 34,88,083.00 |
| 6 | ಸಮವಸ್ತ್ರ ಖರೀದಿ | 11,98,540.00 | - | 23,02,412.00 | 35,00,952.00 |
| 7 | ಕ್ಯಾಪ್ ಖರೀದಿ | - | - | 2,60,000.00 | 2,60,000.00 |
| 8 | ರಕ್ಷಣಾ ಪರಿಕರಗಳ ಖರ್ಚಿನ ವಿವರ | 23,70,656.00 | 33,27,818.00 | 52,58,446.00 | 1,09,56,920.00 |
| 9 | ಪುಸ್ತಕ, ಪ್ರಮಾಣ ಪತ್ರ ಮತ್ತು ಇತರ ಮುದ್ರಣ ಬಾಬ್ತು | 2,50,066.00 | 3,69,888.00 | 1,12,239.00 | 7,32,193.00 |
| 10 | ಇತರೇ ಮಂಜೂರಾತಿ (ಪಾದಯಾತ್ರೆ, ಗಿಡನಾಟಿ, ಮರಣ ಸಾಂತ್ವನ, ಮನೆ ರಚನೆ ಇತ್ಯಾದಿ) | 9,70,685.00 | 2,57,723.00 | 2,31,017.00 | 14,59,425.00 |
| 11 | ಸಂಪೂರ್ಣ ಸುರಕ್ಷಾ ಹಾಗೂ ಆರೋಗ್ಯ ರಕ್ಷಾ | 9,07,936.00 | 24,38,016.00 | 8,32,660.00 | 41,78,612.00 |
| | ಒಟ್ಟು | 95,31,874 | 1,01,65,164 | 1,10,73,560 | 3,07,70,598 |